ಜಲ. ಅಲ್ಲಿ. ಆಕಾಶ ಅದರೊಳಗೆ ಪ್ರತಿಫಲನ. ಝೀ ಎನ್ನುವ ಸದ್ದು ಮತ್ತು ಮೌನ.

'ಬಂದು ಒಂದು ಮಾತೂ ಆಡದೆ ಮಲಗಿದೆ. ಎಚ್ಚರ ಆದಾಗ ನೋಡ್ತೀನಿ ನೀನು ಪಕ್ಕದಲ್ಲಿ. ಆದರೆ ನೀನು ಕಂಡ ಕನಸು ನಾನು ಕಂಡೆ. ಆದರೆ ಶವವಾಗಿದ್ದೆ ಅಂತಹ ನಿದ್ರೆ. ಅದು ಯಾವ ಮಾಯದ ನಿದ್ರೆಯೋ ಏನೋ. ಅದೂ ಮಟ ಮಟ ಮಧ್ಯಾಹ್ನದಲ್ಲಿ. ಅವಳು ಪಕ್ಕದಲ್ಲಿ ತನ್ನ ಸ್ನೇಹಿತೆಯರ ಜೊತೆ ಏನೋ ಡಿಸ್ಕಷನ್ ಮಾಡ್ತಾ ಇದ್ದಳು. ಆದರೆ ನಾನು ಊಹಿಸಿಕೊಳ್ಳಲು ಸಾಧ್ಯವಿಲ್ಲ ನೀನು ಅಂತಹ ಕನಸನ್ನು ಕಂಡದ್ದು. ಅದೂ ನಾನು ಆ ರೀತಿ. ಕನಸುಗಳು ವಿಚಿತ್ರ ಬಿಡು, ಅರ್ಥ ಆಗೋಲ್ಲ. ಆದರೂ ನೀನು ನನ್ನ ಬಗ್ಗೆ ಹೇಗೆಲ್ಲ ಯೋಚಿಸ್ತಿಯಾ, ಅಲ್ಲ ನಿನಗೆ ನನ್ನ ಬಗ್ಗೆ ಯಾಕೆ ಆ ಥರ ಅನುಮಾನ ಬಂತು. ಆದರೆ ನಾನು ಅದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳೊಲ್ಲ. ನನ್ನ ಕನಸಲ್ಲಿ ಅದನ್ನು ಅಂದರೆ ಆ ದೃಶ್ಯವನ್ನು ನೆನೆಸಿಕೊಂಡು ಎಷ್ಟು ನಕ್ಕೆ ನನಗೆ ನಾನೇ ಗೊತ್ತಾ? ಆಗ ಎಚ್ಚರ ಆಯ್ತು. ಪಕ್ಕದಲ್ಲಿ ನೀನು ಮಲಗಿದ್ದೆ. ನಿನಗೆ ಎಲ್ಲಿ ಗೊತ್ತಾಗಬೇಕು. ನೀನು ಮಲಗಿದ್ದಲ್ಲ. ಪ್ರಯಾಣದ ಸುಸ್ತು. ಆದರೂ ಬಂದವನು ನೇರ ಎಬ್ಬಿಸಬಹುದಿತ್ತು. ಹೌದು ಆ ಕನಸು ಇದೇ ಮೊದಲೋ ಅಥವಾ ಈಗಾಗಲೆ ಅನೇಕ ಸಲ ಕಂಡಿದ್ದೋ? ನನಗೆ ಈಗಲೂ ನಂಬುವುದಕ್ಕೆ ಆಗ್ತಿಲ್ಲ ನಿನಗೆ ಅಂತಹ ಕನಸು ಬೀಳುತ್ತವೆ ಎಂದು.

ಅವಳ ಬಿಂಬ ನೀರಿನಲ್ಲಿ ಅಲೆಯಾಗಿತ್ತು. ಅದನ್ನೇ ನೋಡುತ್ತಿದ್ದ. ಅವಳು ಅವನನ್ನು. ನಕ್ಕಳು. ಮೂಗಿನ ನತ್ತು ಮಿಂಚುತ್ತಿತ್ತು. ಅವನು ಅವಳ ಬಿಂಬವನ್ನೇ ನೋಡುತ್ತಿದ್ದ. ಅದು ಅಲೆಯಾಗಿ ಅಲೆ ಅಲೆಯಾಗಿ ಹರಿಯುತ್ತಿತ್ತು. ನೀರು ಹರಿಯುತ್ತಿತ್ತು, ಬಿಂಬ ಅಲ್ಲಿಯೇ ಇತ್ತು. ಅವಳು ಅವನನ್ನು ನೋಡುತ್ತಿದ್ದ. ಅವನು ಅವಳ ಬಿಂಬವನ್ನು ನೋಡುತ್ತಿದ್ದ.

ಅವನು ಹೊರಡುವುದಕ್ಕೂ ಎರಡು ಮೂರು ದಿನಗಳ ಹಿಂದೆ. ಹಂಚಿನ ಮೇಲಿಂದ ಇಳಿದು ಬಿಂದಿಗೆಯಲ್ಲಿ ಮಳೆ. ಮಳೆಯ ಧೋ ಎನ್ನುವ ಸದ್ದು. ಅದರಲ್ಲಿ ಬಿಂದಿಗೆಯಲ್ಲಿ ಬೀಳುವ ಮಳೆಯ ಹನಿಯ ಶಬ್ದ. ಪಟ್ ಪಟ್. ಮಳೆ ಜಲದ ಸದ್ದು. ಅದು ಜಲವ ತುಂಬಿಸಿಕೊಳ್ಳುತ್ತಿರುವ ಲೋಹದ ಬಿಂದಿಗೆಯಲ್ಲಿ ಬೆರೆತಿದೆ. ಮಾಡಿನಿಂದ ಇಳಿದು ಹರಿದು ಹೋಗುತ್ತಿದೆ ಮಳೆ ಇಳೆಯ ಮೇಲೆ. ಮುದ ನೀಡುವ ಮಧ್ಯಾಹ್ನ ಮಲ್ಲಿಗೆಯ ಪರಿಮಳ ಮಳೆಯ ಜಲದಲಿ ಒದ್ದೆಯಾಗಿದೆ. ಪಕಳೆಗಳೂ. ಹಿಂದಿನ ದಿನ ಇದೇ ಹೊತ್ತಿನಲ್ಲಿ ಲಕಲಕ ನಗುತ್ತಿದ್ದವು. ವಿದ್ಯುತ್ ದೀಪದ ಕಂಬದ ವೈರಿನ ಮೇಲೆ ಒಂದು ಪಕ್ಷಿ ಕುಳಿತು ಇವು ಅರಳಿ ನಗಾಡುತ್ತ ಕುಣಿಯುತ್ತಿರುವುದನ್ನು ನೋಡುತ್ತಿದೆ. ಕಾಲ ಸ್ಥಿರಗೊಂಡಿದೆ ಅಲ್ಲಿ. ಆಗ. ಆ ಥರ. ತದೇಕ ಚಿತ್ತದಲ್ಲಿ ಅದು ಅವುಗಳನ್ನು ನೋಡುತ್ತಿತ್ತು. ಆಕಾಶದ ತುಂಬ ಆಕಾಶದ ಬಣ್ಣ . ಬಯಲ ವ್ಯೋಮ ನಿಚ್ಚಳ. ಪಕ್ಷಿಯಲ್ಲಿ ಸ್ಥಿಲ್ಲಾಗಿದ್ದ ಕಾಲ ಹೂವುಗಳಲ್ಲಿ ಮಿಸುಕಾಡುತ್ತಿತ್ತು. ಎತ್ತುಗಳ ಕಣ್ಣುಗಳಲ್ಲಿ ನೀರಿನ ಬಾನಿ. ಪಕ್ಕದ ಓಣಿಯಲ್ಲಿ ಹಾದು ಹೋದವು. ಮಧ್ಯಾಹ್ನ ಮಲ್ಲಿಗೆ ಅವುಗಳನ್ನು ನೋಡಲಿಲ್ಲ. ಅವೂ ಇವುಗಳನ್ನು ನೋಡಲಿಲ್ಲ. ಬಾನಿಯ ನೀರಲ್ಲಿ ಒಂದು ನೀರ ಮೇಲೆ ಹಾರುವ ನೂಲಿನಷ್ಟು ತೆಳುವಾದ ಚಿಟ್ಟೆ ಮೇಲ್ಮೈಯನ್ನು ಟಚ್ ಮಾಡಿಕೊಂಡು ನಭದ ಕಡೆ ಹಾರಿತು. ಆಗ ಅಲ್ಲಿ ಪುಟ್ಟ ಅಲೆ. ಕಾಲ ಸ್ಪಷ್ಟದಲಿ ವ್ಯಕ್ತ ಆಗ ಅಲ್ಲಿ. ಚಿಟ್ಟೆ ಹಾರಿಕೊಂಡು ಹೋಗುವಾಗ ಎತ್ತುಗಳ ಕಣ್ಣುಗಳಿಗೆ ತಾಗಿತು. ಹೆಜ್ಜೆ ಜೋರಾಯಿತು. ಕಾಲ ನಕ್ಕಿತು. ಪಕ್ಷಿ ವಿದ್ಯುತ್ ಕಂಬದ ವೈರಿನ ಮೇಲೆ ಕುಳಿತುಕೊಂಡು ಮಧ್ಯಾಹ್ನ ಮಲ್ಲಿಗೆಗಳ ನೋಡುತ್ತಿತ್ತು. ದಟ್ಟ ಕೆಂಪು ಅವು. ಸಂಜೆ ದಟ್ಟವಾಗಿಸುತ್ತಿತ್ತು. ಅದಕ್ಕೆ ಪಕ್ಷಿಯೊಂದರ ಹಾರುವ ಸದ್ದು ಕೇಳಿಸಿತು. ಕ್ಷಣದಲ್ಲಿ ಹಾರಿ ಹೋಯಿತು ಅದರ ದಿಕ್ಕಿನ ಕಡೆ. ಮಳೆಗೆ ಮುದುಡಿದೆ ದಳ. ಪರಿಮಳದ ಒದ್ದೆ. ಲೋಹದ ಬಿಂದಿಗೆ ತುಂಬಿ ಶಬ್ದ ಬೇರೆಯ ಮಜಲನ್ನು ತಲುಪಿತ್ತು. ಕತ್ತಲು ಮತ್ತಷ್ಟು ಕತ್ತಲಾಗುತ್ತಿತ್ತು. ಇರುವ ಎಲ್ಲವೂ ಅದರೊಳಗೆ. ಆದರೆ ಮಳೆ ಜಲದಲಿ ಒದ್ದೆಯಾದ ರಾಗ ನಿರಂತರ ವಿವಿಧ ಮಜಲುಗಳ ದಾಟಿಕೊಂಡು. ಮಿಂಚು. ಬೆಳಕು ಚಣ ಜಲವಾಗಿ ರಪ್ಪಂಥ ನೆಲದಲ್ಲಿ ಬಿದ್ದಿತು. ಕುಂಬಳಕಾಯಿ ನೇತಾಡುತ್ತಿತ್ತು. ಕೋಳಿ ಕಣ್ಣು ಬಿಟ್ಟುಕೊಂಡಿದೆ. ಅಟ್ಟದ ಒಂದು ದಬ್ಬೆಯ ಮೇಲೆ ಕುಳಿತಿದೆ. ಇನ್ನೊಂದು ಕೋಳಿ ಇದೆ. ಅದು ಒಂದು ಬಿದಿರಿನ ಬುಟ್ಟಿಯಲ್ಲಿ ಕುಳಿತಿದೆ. ಅದರ ಅಡಿಯಲ್ಲಿ ತತ್ತಿಗಳು. ತತ್ತಿಗಳ ಅಡಿಯಲ್ಲಿ ತಂಗಟೆ ಸೊಪ್ಪು. ಇನ್ನೊಂದು ಹುಂಜ. ಅದು ಬಿದ್ದ ಮಿಂಚಿಗೆ ಬೆದರಿ ಕೂಗಿಕೊಂಡಿತು. ಇಲಿಯೊಂದು ಟಮೋಟವನ್ನು ತನ್ನ ಕಣ್ಣುಗಳ ಅತ್ತ ಇತ್ತ ತಿರುಗಿಸುತ್ತ